All India Radio: Bangalore
National Bulletin In Kannada
10.11.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
<><><><>

ಮುಖ್ಯಾಂಶಗಳು

1. ಲುವಾಂಡಾದಲ್ಲಿ ಅಂಗೋಲಾದ ರಾಷ್ಟ್ರೀಯ ಸಂಸತ್ ಅನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದು ಭಾಷಣ
2. ನಾಳೆಯಿಂದ ಎರಡು ದಿನ ಪ್ರಧಾನಿ ನರೇಂದ್ರ ಮೋದಿ ಭೂತಾನ್ ಗೆ ಭೇಟಿ : ದ್ವಿಪಕ್ಷೀಯ ಸಂಬಂಧ ಬಲವರ್ಧನೆ ಕುರಿತು ಚರ್ಚೆ
3. ಬಿಹಾರ ವಿಧಾನಸಭಾ ಚುನಾವಣೆ ; ಎರಡನೇ ಹಂತದಲ್ಲಿ ೧೨೨ ಕ್ಷೇತ್ರಗಳಿಗೆ ನಾಳೆ ಮತದಾನ ; ಆಯೋಗದಿಂದ ಅಗತ್ಯ ಸಿದ್ಧತೆ
4. ಐಎಸ್ಎಸ್ಎಫ್ ವಿಶ್ವ ಚಾಂಪಿಯನ್ ಶಿಪ್ ; ಬೆಳ್ಳಿ ಗೆದ್ದು ಇತಿಹಾಸ ನಿರ್ಮಿಸಿದ ಭಾರತದ ಅನೀಶ್ ಭನ್ವಾಲಾ

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ಲುವಾಂಡಾದಲ್ಲಿ ಅಂಗೋಲಾದ ರಾಷ್ಟ್ರೀಯ ಸಂಸತ್ತಿನಲ್ಲಿ ಅಂಗೋಲಾದ ಸಂಸದರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿ, ಅಂಗೋಲಾದೊಂದಿಗೆ ಸಂಸದೀಯ ಸಹಕಾರವನ್ನು ಹೆಚ್ಚಿಸಲು ಭಾರತ ಆಶಿಸುತ್ತಿದೆ ಎಂದು ರಾಷ್ಟ್ರಪತಿ ಅವರು ನಿನ್ನೆ ಹೇಳಿದ್ದರು. ಪರಸ್ಪರ ವಿನಿಮಯದ ಮೂಲಕ ಪ್ರಜಾಪ್ರಭುತ್ವ ಸಂಸ್ಥೆಗಳು ಪರಸ್ಪರರ ಅನುಭವದಿಂದ ಕಲಿಯುವ ಅಗತ್ಯವನ್ನು ಅವರು ಒತ್ತಿ ಹೇಳಿದ್ದರು. ಭಾರತವು ತನ್ನ ಸಂಸದೀಯ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು ಸಿದ್ಧವಾಗಿದೆ ಎಂದು ಅವರು ಇದೇ ವೇಳೆ ಹೇಳಿದರು.

(ಧ್ವನಿ : ರಾಷ್ಟ್ರಪತಿ ೨೪ ಸೆಕೆಂಡ್‌ಗಳು)

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಗೋಲಾದ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ. ಅಂಗೋಲಾದಲ್ಲಿರುವ ಭಾರತೀಯ ಸಮುದಾಯದ

ಸಂಖ್ಯೆ ಸುಮಾರು ೮ ಸಾವಿರವಿದೆ. ಅಂಗೋಲಾದಲ್ಲಿ ಸುಮಾರು ೨೦೦ ಭಾರತೀಯ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ ಎಂದು ಅಂದಾಜಿಸಲಾಗಿದೆ. ವಿಶೇಷವಾಗಿ ಚಿಲ್ಲರೆ ವ್ಯಾಪಾರ, ಆತಿಥ್ಯ, ಕೃಷಿ, ಪ್ಲಾಸ್ಟಿಕ್, ಲೋಹ, ಔಷಧ, ವಜ್ರಗಳು ಮತ್ತು ಆಟೋಮೊಬೈಲ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಿನ್ನೆ ಅಂಗೋಲಾದ ಅಧ್ಯಕ್ಷ ಜೊವಾವೊ ಲೌರೆಂಕೊ ಅವರೊಂದಿಗೆ ವ್ಯಾಪಕ ಚರ್ಚೆ ನಡೆಸಿದ್ದರು.

<><><>

ಪ್ರಧಾನಿ ನರೇಂದ್ರ ಮೋದಿ ಭೂತಾನ್‌ಗೆ ನಾಳೆಯಿಂದ ಎರಡು ದಿನಗಳ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನಿ ಮೋದಿ ಹಾಗೂ ಭೂತಾನ್ ದೊರೆ ಜಿಗ್ಮೆ ಕೇಸರ್ ನ್ಯಾಮಗೆಲ್ ವಾಂಗ್‌ಚುಕ್ ಜಂಟಿಯಾಗಿ ಪುನ್ಯಾತ್‌ಸ್ಯಾಂಗ್‌ಚು ಜಲವಿದ್ಯುತ್ ೨ನೇ ಯೋಜನೆಯನ್ನು ಉದ್ಘಾಟಿಸಲಿದ್ದಾರೆ. ಒಂದು ಸಾವಿರದ ೨೦ ಮೆಗಾವ್ಯಾಟ್ ಸಾಮರ್ಥ್ಯದ ಈ ಜಲವಿದ್ಯುತ್ ಯೋಜನೆಯನ್ನು ಭಾರತ ಹಾಗೂ ಭೂತಾನ್ ಜಂಟಿಯಾಗಿ ಅಭಿವೃದ್ಧಿಪಡಿಸಿವೆ. ಪ್ರಧಾನಿಯವರು ಭೂತಾನ್‌ನ ೪ನೇ ದೊರೆ ಜಿಗ್ಮೆ ವಾಂಗ್ ಚುಕ್ ಅವರ ೭೦ನೇ ಜನ್ಮ ದಿನೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ ಹಾಗೂ ಭೂತಾನ್ ಪ್ರಧಾನಿ ಟೆಶೆರಿಂಗ್ ತೊಬ್ಗೆ ಅವರನ್ನು ಭೇಟಿ ಮಾಡಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಜಾಗತಿಕ ಶಾಂತಿ ಪ್ರಾರ್ಥನಾ ಉತ್ಸವದಲ್ಲಿ ಪಾಲ್ಗೊಂಡು, ಥಿಂಪುವಿನ ತಶಿಚಾಡಜೊಂಗ್‌ನಲ್ಲಿ ಇರುವ ಪವಿತ್ರ ಅವಶೇಷಗಳಿಗೆ ಪ್ರಾರ್ಥನೆ ಸಲ್ಲಿಸಲಿದ್ದಾರೆ. ಪ್ರಧಾನಿಯವರ ಈ ಭೇಟಿ ಉಭಯ ದೇಶಗಳ ಪ್ರಾದೇಶಿಕ ಹಾಗೂ ಪರಸ್ಪರ ಹಿತಾಸಕ್ತಿಯ ವಿಚಾರ ಕುರಿತ ಚರ್ಚೆಗೆ ಅವಕಾಶ ಕಲ್ಪಿಸಲಿದ್ದು, ದ್ವಿಪಕ್ಷೀಯ ಸಹಭಾಗಿತ್ವ ಬಲಗೊಳ್ಳಲು ಅವಕಾಶ ಕಲ್ಪಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

<><><>

ಭಾರತದಿಂದ ಕಳುಹಿಸಲಾದ ಭಗವಾನ್ ಬುದ್ಧರ ಪವಿತ್ರ ಅವಶೇಷಗಳಿಗೆ ಭೂತಾನಿನ ನಾಯಕರು ಹಾಗೂ ಜನತೆ ತೋರಿದ ಶ್ರದ್ಧಾ ಗೌರವಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಅವಶೇಷಗಳು ಶಾಂತಿ, ಅನುಕಂಪ ಹಾಗೂ ಸಾಮರಸ್ಯದ ಪ್ರತೀಕವಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ ತಿಳಿಸಿದ್ದಾರೆ. ಭಗವಾನ್ ಬುದ್ಧರ ಉಪದೇಶಗಳು ಭಾರತ-ಭೂತಾನ್ ನಡುವಿನ ದೈವಿಕ ಪರಂಪರೆಯ ಪವಿತ್ರ ಸಂಬಂಧಗಳಾಗಿವೆ ಎಂದು ಪ್ರಧಾನಿಯವರು ತಿಳಿಸಿದ್ದಾರೆ.

<><><>

ಗೋವಾದಲ್ಲಿ ನಿನ್ನೆ ನಡೆದ ಐರನ್ ಮ್ಯಾನ್ ೭೦.೩ ನಂತಹ ಕಾರ್ಯಕ್ರಮಗಳಲ್ಲಿ ಯುವಕರ ಭಾಗವಹಿಸುವಿಕೆಯನ್ನು ಪ್ರಧಾನಿ ನರೇಂದ್ರ ಮೋದಿ ಸ್ವಾಗತಿಸಿದ್ದಾರೆ. ಇಂತಹ ಕಾರ್ಯಕ್ರಮಗಳು ಫಿಟ್ ಇಂಡಿಯಾ ಆಂದೋಲನಕ್ಕೆ ಕೊಡುಗೆ ನೀಡುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ಹೇಳಿದ್ದಾರೆ. "ಭಾಗವಹಿಸಿದ ಎಲ್ಲರಿಗೂ ಅಭಿನಂದನೆಗಳು" ಎಂದು ಇದೇ ವೇಳೆ ಅವರು ಹೇಳಿದ್ದಾರೆ.

<><><>

ಬಿಹಾರ ವಿಧಾನಸಭೆಯ ಎರಡನೇ ಚುನಾವಣೆಗೆ ಎಲ್ಲಾಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಈ ಹಂತದಲ್ಲಿ ೨೦ ಜಿಲ್ಲೆಗಳ ೧೨೨ ಕ್ಷೇತ್ರಗಳಿಗೆ ನಾಳೆ ಮತದಾನ ನಡೆಯಲಿದೆ. ೩ ಕೋಟಿ ೭೦ ಲಕ್ಷಕ್ಕೂ ಹೆಚ್ಚು ಮತದಾರರು ೧೩೬ ಮಹಿಳೆಯರು ಸೇರಿದಂತೆ ೧ ಸಾವಿರದ ೩೦೨ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ. ೭ ಕ್ಷೇತ್ರಗಳನ್ನು ಹೊರತುಪಡಿಸಿ ಬೆಳಗ್ಗೆ ೭ ಗಂಟೆಗೆ ಮತದಾನ ಪ್ರಾರಂಭವಾಗಲಿದ್ದು, ಸಂಜೆ ೬ ಗಂಟೆಗೆ ಮುಕ್ತಾಯಗೊಳ್ಳಲಿದೆ. ಈ ಹಂತದ ಬಹಿರಂಗ ಪ್ರಚಾರ ನಿನ್ನೆ ಸಂಜೆ ಕೊನೆಗೊಂಡಿತು. ಮೊದಲ ಹಂತಕ್ಕೆ ಕಳೆದ ೬ ರಂದು ಮತದಾನ ನಡೆದಿದ್ದು, ಇದು ಸುಮಾರು ಶೇಕಡ ೬೫ ರಷ್ಟು ದಾಖಲೆ ಪ್ರಮಾಣದಲ್ಲಿ ಮತದಾನವಾಗಿದೆ. ಈ ತಿಂಗಳ ೧೪ ರಂದು ಮತ ಎಣಿಕೆ ನಡೆಯಲಿದೆ.

<><><>

ಬಿಹಾರ ವಿಧಾನಸಭಾ ಚುನಾವಣೆಯಲ್ಲದೆ, ೭ ರಾಜ್ಯಗಳ ಎಂಟು ವಿಧಾನಸಭಾ ಕ್ಷೇತ್ರಗಳಿಗೆ ನಾಳೆ ಉಪಚುನಾವಣೆ ನಡೆಯಲಿದೆ. ಜಮ್ಮು ಮತ್ತು ಕಾಶ್ಮೀರದ ಬುದ್ಗಾಮ್ ಮತ್ತು ನಗ್ರೋಟಾ, ರಾಜಸ್ಥಾನದ ಅಂತಾ, ಜಾರ್ಖಂಡ್ ನ ಘಟ್ಸಿಲಾ, ತೆಲಂಗಾಣದ ಜುಬಿಲಿ ಹಿಲ್ಸ್, ಪಂಜಾಬ್ ನ ತರ್ನ್ ತರನ್, ಮಿಜೋರಾಂನ ದಂಪಾ ಮತ್ತು ಒಡಿಶಾದ ನುವಾಪಾಡಾ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದೆ. ಬಿಹಾರ ವಿಧಾನಸಭಾ ಚುನಾವಣೆಯ ಜೊತೆಗೆ ನವೆಂಬರ್ ೧೪ ರಂದು ಮತ ಎಣಿಕೆ ನಡೆಯಲಿದೆ.

<><><>

ಪ್ರಮುಖ ಸಾಮಾಜಿಕ ಉಪಕ್ರಮದಲ್ಲಿ, ಅಸ್ಸಾಂ ಸಂಪುಟ ಸಭೆ, ಅಸ್ಸಾಂ ಬಹುಪತ್ನಿತ್ವ ನಿಷೇಧ ಮಸೂದೆ, ೨೦೨೫ ಕ್ಕೆ ಅನುಮೋದನೆ ನೀಡಿದೆ. ಇದು ಆರನೇ ಶೆಡ್ಯೂಲ್ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದಾದ್ಯಂತ ಬಹುಪತ್ನಿತ್ವದ ಅಭ್ಯಾಸವನ್ನು ಕಾನೂನುಬಾಹಿರಗೊಳಿಸುವ

ಮತ್ತು ತೊಡೆದುಹಾಕುವ ಗುರಿಯನ್ನು ಹೊಂದಿದೆ. ಯಾವುದೇ ವ್ಯಕ್ತಿಯು ಈಗಾಗಲೇ ಜೀವಂತ ಸಂಗಾತಿಯನ್ನು ಹೊಂದಿದ್ದರೆ, ಕಾನೂನುಬದ್ಧವಾಗಿ ಬೇರ್ಪಡದಿದ್ದರೆ ಅಥವಾ ಅವರ ಹಿಂದಿನ ಮದುವೆಯನ್ನು ವಿಚ್ಛೇದನದ ಆದೇಶದ ಮೂಲಕ ವಿಸರ್ಜಿಸದಿದ್ದರೆ ಮದುವೆಯಾಗುವುದನ್ನು ಮಸೂದೆ ನಿಷೇಧಿಸುತ್ತದೆ. ಇದು ಬಹುಪತ್ನಿತ್ವ ವಿವಾಹಗಳಿಂದ ಬಳಲುತ್ತಿರುವ ಮಹಿಳೆಯರಿಗೆ ಪರಿಹಾರವನ್ನು ಒದಗಿಸುತ್ತದೆ, ಅಂತಹ ಬಲಿಪಶುಗಳು ಆಗಾಗ್ಗೆ ಅನುಭವಿಸುವ ಅಪಾರ ಕಷ್ಟಗಳನ್ನು ಒಪ್ಪಿಕೊಳ್ಳುತ್ತದೆ.

<><><>

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಇಂದು ಒಡಿಶಾಕ್ಕೆ ಭೇಟಿ ನೀಡಲಿದ್ದು, ರೈತರ ಆದಾಯವನ್ನು ಹೆಚ್ಚಿಸುವುದು, ಪೌಷ್ಟಿಕಾಂಶದ ಭದ್ರತೆಯನ್ನು ಖಾತರಿಪಡಿಸುವುದು ಮತ್ತು ರಾಜ್ಯದಲ್ಲಿ ನೈಸರ್ಗಿಕ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಶಿವರಾಜ್ ಸಿಂಗ್ ಚೌಹಾಣ್ ಅವರು ಮಾಂಡಿಯಾ ದಿವಸ ಅಥವಾ ಸಿರಿಧಾನ್ಯ ದಿನಾಚರಣೆ ಕಾರ್ಯಕ್ರಮದ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಮತ್ತು ದೇಶದ ಇತರ ಭಾಗಗಳಲ್ಲಿ ಸಿರಿಧಾನ್ಯಗಳ ಉತ್ಪಾದನೆ, ಸಂಸ್ಕರಣೆ ಮತ್ತು ಬಳಕೆಯನ್ನು ಉತ್ತೇಜಿಸಲು ಕೇಂದ್ರದ ಉಪಕ್ರಮಗಳನ್ನು ಅವರು ಬಿಂಬಿಸಲಿದ್ದಾರೆ. ನಂತರ ಕೃಷಿ ಸಚಿವರು ಕಟಕ್ ನ ಸದರ್ ಪ್ರದೇಶಕ್ಕೆ ಭೇಟಿ ನನೀಡಲಿದ್ದಾರೆ ಮತ್ತು ರೈತರೊಂದಿಗೆ ನೇರ ಸಂವಾದ ನಡೆಸಲಿದ್ದಾರೆ. ಪ್ರಮುಖ ರಾಷ್ಟ್ರೀಯ ಕೃಷಿ ಉಪಕ್ರಮಗಳ ಅನುಷ್ಠಾನವನ್ನು ಬಲಪಡಿಸುವ ಕುರಿತು ಐಸಿಎಆರ್ - ಕೇಂದ್ರೀಯ ಅಕ್ಕಿ ಸಂಶೋಧನಾ ಸಂಸ್ಥೆಯಲ್ಲಿ ಜಂಟಿ ಕಾರ್ಯತಂತ್ರದ ಸಭೆಯಲ್ಲಿ ಅವರು ಭಾಗವಹಿಸಲಿದ್ದಾರೆ.

<><><>

ಮ್ಯಾನ್ಮಾರ್‌ನಲ್ಲಿ ಇಂದು ಬೆಳಗಿನ ಜಾವ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ ೩.೩ ರಷ್ಟು ತೀವ್ರತೆ ದಾಖಲಾಗಿದೆ. ಮಾರ್ಚ್ ೨೮ರಂದು ಮಧ್ಯ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಹಾಗೂ ಸಾವಿರಾರು ಜನರ ಸ್ಥಳಾಂತರಕ್ಕೆ ಕಾರಣವಾದ ೭.೭ ಮತ್ತು ೬.೪ ತೀವ್ರತೆಯ ಪ್ರಬಲ ಭೂಕಂಪಗಳ ನಂತರ ಈ ಭೂಕಂಪ ಸಂಭವಿಸಿದೆ. ವಿಶ್ವ ಆರೋಗ್ಯ ಸಂಸ್ಥೆ ಅಂದಿನಿಂದ ಪೀಡಿತ ಪ್ರದೇಶಗಳಲ್ಲಿ ಕ್ಷಯ, ಎಚ್‌ಐವಿ ಮತ್ತು ನೀರಿನಿಂದ ಹರಡುವ ರೋಗಗಳು ಸೇರಿದಂತೆ ಆರೋಗ್ಯ

ಅಪಾಯಗಳು ಹೆಚ್ಚಾಗುವ ಬಗ್ಗೆ ಎಚ್ಚರಿಸುತ್ತಿದೆ. ಮ್ಯಾನ್ಮಾರ್ ಭಾರತ, ಯುರೇಷಿಯಾ, ಸುಂದ ಮತ್ತು ಬರ್ಮ, ಟೆಕ್ಟೋನಿಕ್ ಪ್ಲೇಟ್‌ಗಳ ನಡುವೆ ಇರುವ ಹೆಚ್ಚು ಸಕ್ರಿಯ ಭೂಕಂಪನ ವಲಯದಲ್ಲಿದೆ. ಇದು ಆ ದೇಶವನ್ನು ಮಧ್ಯಮ ಮತ್ತು ದೊಡ್ಡ ಭೂಕಂಪಗಳ ಜೊತೆಗೆ ಕರಾವಳಿಯಲ್ಲಿ ಸುನಾಮಿ ಅಪಾಯಗಳಿಗೂ ಗುರಿಯಾಗಿಸುತ್ತದೆ.

<><><><>

ಅಮೆರಿಕದಲ್ಲಿ ವಿಮಾನಯಾನ ಅವ್ಯವಸ್ಥೆ ಮುಂದುವರೆದಿದೆ. ಸಿಬ್ಬಂದಿಯ ಗೈರು ಹಾಜರಾತಿ ಹಿನ್ನೆಲೆಯಲ್ಲಿ ವಿಮಾನಯಾನ ಸಂಸ್ಥೆಗಳು ಸುಮಾರು ೧ ಸಾವಿರದ ೭೦೦ ಕ್ಕೂ ಹೆಚ್ಚು ವಿಮಾನಗಳನ್ನು ರದ್ದುಗೊಳಿಸಿವೆ. ಏರ್ ಟ್ರಾಫಿಕ್ ಕಂಟ್ರೋಲರ್ ಗಳಲ್ಲಿ ತೀವ್ರ ಸಿಬ್ಬಂದಿ ಕೊರತೆಯಿಂದಾಗಿ ಸಾವಿರಾರು ವಿಮಾನಗಳು ವಿಳಂಬಗೊಂಡಿವೆ.

<><><><>

ಮುಂದಿನ ಮೂರು ದಿನಗಳಲ್ಲಿ ಮಧ್ಯಪ್ರದೇಶ, ಛತ್ತೀಸ್ ಗಢ ಮತ್ತು ಜಾರ್ಖಂಡ್ ನಲ್ಲಿ ಶೀತ ಅಲೆಯ ಪರಿಸ್ಥಿತಿ ಮೇಲುಗೈ ಸಾಧಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪೂರ್ವ ರಾಜಸ್ಥಾನದಲ್ಲಿ ಇಂದಿಗೂ ಇದೇ ರೀತಿಯ ಹವಾಮಾನ ಪರಿಸ್ಥಿತಿ ಮುಂದುವರಿಯಲಿದೆ. ಮುಂದಿನ ಎರಡು ಮೂರು ದಿನಗಳಲ್ಲಿ ಈಶಾನ್ಯ ಭಾರತದಲ್ಲಿ ಕನಿಷ್ಠ ತಾಪಮಾನವು ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್ ನಷ್ಟು ಕುಸಿಯುವ ನಿರೀಕ್ಷೆಯಿದೆ.

<><><><>

ಈಜಿಪ್ಟ್‌ನ ಕರೋದಲ್ಲಿ ನಡೆದ ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್ ಶಿಪ್ ಶೂಟಿಂಗ್ ಪಂದ್ಯಾವಳಿಯ ಪುರುಷರ ೨೫ ಮೀಟರ್ ರ್‍ಯಾಪಿಡ್ ಫೈಯರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತದ ಅನೀಶ್ ಭನ್ವಾಲಾ ಬೆಳ್ಳಿ ಪದಕ ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಅಂತಿಮ ಸುತ್ತಿನಲ್ಲಿ ಅವರು, ೨೮ ಅಂಕಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಈ ಸಾಧನೆಯ ಮೂಲಕ ಅನೀಶ್ ಒಲಿಂಪಿಕ್ ಸ್ಪರ್ಧೆಯ ಭಾಗವಾದ ವಿಶ್ವ ಚಾಂಪಿಯನ್ ಶಿಪ್‌ನಲ್ಲಿ ಪದಕ ಗೆದ್ದ ಮೊದಲ ಭಾರತೀಯ ವೈಯಕ್ತಿಕ ಪಿಸ್ತೂಲ್ ಶೂಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

<><><><>

ಭಾರತದ ಗ್ರ್ಯಾಂಡ್‌ಮಾಸ್ಟರ್ ಕಾರ್ತಿಕ್ ವೆಂಕಟರಾಮನ್ ಗೋವಾದ ಪಣಜಿಯಲ್ಲಿ ನಡೆಯುತ್ತಿರುವ ಫಿಡೆ ಚೆಸ್ ವಿಶ್ವಕಪ್ ೨೦೨೫ ರ ನಾಲ್ಕನೇ ಸುತ್ತಿಗೆ ಮುನ್ನಡೆದಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>